ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆಂಟನೆಯ ಅಧಿವೇಶನ

## ಗುರುವಾರ, ದಿನಾಂಕ: 18ನೇ ಜುಲೈ, 2019

ರಾಜ್ಯದಲ್ಲಿ ವಿದ್ಯುತ್ತಿನ ಉತ್ಪಾದನೆಯಲ್ಲಿ ಇಳಿಮುಖವಾಗಿದ್ದು, ಸೌರಶಕ್ತಿಯ ಉತ್ಪಾದನೆ ಬಗ್ಗೆ

ಶ್ರೀ ಮಹಾಂತೇಶ ಮ. ಕವಟಗಿಮಠ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

299 (202) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಪ್ರತಿ ವರ್ಷ ಎಷ್ಟು ಮೆಗಾ ವ್ಯಾಟ್ ವಿದ್ಯುತಿನ ಬೇಡಿಕೆ ಇದೆ ;

(ಆ) ರಾಜ್ಯದಲ್ಲಿ ವಿವಿಧ ಮೂಲಗಳಿಂದ ಎಷ್ಟು ಮೆಗಾ ವ್ಯಾಟ್ ವಿದ್ಯುತ್‌ನ್ನು ಉತ್ಪಾದಿಸಲಾಗುತ್ತಿದೆ ; (ವರ್ಗವಾರು ವಿವರ ನೀಡುವುದು)

(ಇ) ಬೇಡಿಕೆ ಮತ್ತು ಸರಬರಾಜಿನ ಮಧ್ಯೆ ಇರುವ ಕೊರತೆಯನ್ನು ಯಾವ ಮೂಲಗಳಿಂದ ತುಂಬಲಾಗುತ್ತಿದೆ ;

(ಈ) ಸರ್ಕಾರವು ಈ ಕೊರತೆಯನ್ನು ಸೌರಶಕ್ತಿಯಿಂದ ವಿದ್ಯುತ್ ಉತ್ಪಾದನೆಗೆ ಹೆಚ್ಚು ಒತ್ತು ಕೊಡುವ ನಿಟ್ಟಿನಲ್ಲಿ ತೆಗೆದುಕೊಂಡ ಕ್ರಮಗಳೇನು ;

(ಉ) ಸಾರ್ವಜನಿಕರು ತಮ್ಮ ತಮ್ಮ ಮನೆಗಳ ಮೇಲೆ ವಿದ್ಯುತ್ ಪೆನಲ್‌ಗಳನ್ನು ಅಳವಡಿಸಿ ಅವುಗಳ ಮುಖಾಂತರ ತಮ್ಮ ಮನೆಗಳಿಗೆ ಬೇಕಾದಂತಹ ವಿದ್ಯುತ್‌ನ್ನು ತಾವೇ ಉತ್ಪಾದಿಸುವುದರೊಂದಿಗೆ ಹೆಚ್ಚಿನ ವಿದ್ಯುತ್‌ನ್ನು ಸರ್ಕಾರದ ವಿದ್ಯುತ್ ಚಾಲಕ್ಕೆ ವರ್ಗಾವಣೆ ಮಾಡಲು ಸರ್ಕಾರವು ಹೊಸ ಯೋಜನೆಗಳೇನಾದರೂ ರೂಪಿಸಿದೆಯೇ ; ಹಾಗಿದ್ದಲ್ಲಿ, ವಿವರ ನೀಡುವುದು ?